ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ (ರಿ) - ಅಮುಕ್ತ್
ASSOCIATION OF MANGALORE UNIVERSITY COLLEGE TEACHERS ® - AMUCT
Est: 1985 website:www.amuct.org Regd. No 8/90 - 91
Ist Floor, Nithyananda Complex, A S R P Road, Dongarakeri, Kodialbail, Mangalore - 575003
AFFILIATED TO : Federation of University and College Teachers' Associations in Karnataka (FUCTAK) & All India Federation of University and College Teachers' Organisations (AIFUCTO)

PRESIDENT
Dr NORBERT LOBO
M.A., M.H.R.M., M. Phil., Ph.D.
Associate Professor & HOD of Economics
St Aloysius College (Autonomous)
Mangalore - 575 003. Cell : 99641 44583
E-mail : norbert.lobo@gmail.com
Vice-President: Aifucto & Fuctak

TREASURER
Mr CHARLES STANY PAIS
M.Com.
Associate Professor of Secretarial Practice
St Agnes College (Autonomous)
Mangalore- 575 002
Cell: 94481 60154
E-mail : charlespais@yahoo.com

GENERAL SECRETARY
Mr LAKSHMINARAYANA BHAT A.
M.A.
Associate Professor of Economics
Besant Evening College
Mangalore - 575 003
Cell: 94819 76995
E-mail : laxminbhat64@gmail.com

Amuct/GS/ HE-1/ 2015-16 Date:March 12 , 2016

ಶ್ರೀ ಟಿ ಬಿ ಜಯಚಂದ್ರ
ಮಾನ್ಯ ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು–560001.

ಮಾನ್ಯರೇ,

**ವಿಷಯ: ಕಾಲೇಜು ಶಿಕ್ಷಕರ ಬೇಡಿಕೆಗಳು.**

ಸುಮಾರು ಮೂರುವರೆ ದಶಕಗಳ ಇತಿಹಾಸ ಹೊಂದಿರುವ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ, ಅಮುಕ್ತ್ ರಾಜ್ಯ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಶಿಕ್ಷಕರ ಸಂಘಗಳ ಒಕ್ಕೂಟಕ್ಕೆ ಸಂಯೋಜಿಸಲ್ಪಟ್ಟ ಸಂಘಟನೆಯಾಗಿದ್ದು, ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳಿಗೊಳಪಟ್ಟ ಖಾಸಗೀ ಕಾಲೇಜು ಶಿಕ್ಷಕರುಗಳ ಸೇವಾ ಸೌಲಭ್ಯಗಳು, ಕಾಲೇಜು ಶಿಕ್ಷಣದ ಗುಣಮಟ್ಟ, ಹಾಗೂ ವಿಶ್ವವಿದ್ಯಾನಿಲಯದ ಕಾರ್ಯವೈಖರಿಯ ಬಗ್ಗೆ ಆಗಿಂದಾಗ್ಯೆ ಗಮನ ಹರಿಸುತ್ತಾ ಬಂದಿರುವುದು ಮಾತ್ರವಲ್ಲದೆ ಸರಕಾರಕ್ಕೆ ಹಾಗೂ ಸಂಬಂಧಪಟ್ಟ ನೀತಿ ನಿರೂಪಕರಿಗೆ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿರುತ್ತದೆ. ಈ ಭಾಗದ ಉನ್ನತ ಶಿಕ್ಷಣದ ಗುಣಮಟ್ಟವನ್ನು ಉನ್ನತೀಕರಿಸುವಲ್ಲಿ ತನ್ನದೇ ರೀತಿಯ ಕೊಡುಗೆಯನ್ನು ನೀಡುತ್ತಿದೆ. ವಿವಿಧ ಸಾಮಾಜಿಕ ಸಮಸ್ಯೆ/ವಿಚಾರಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುತ್ತದೆ.

ರಾಜ್ಯದ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಬಹು ದೊಡ್ಡಕೊಡುಗೆಯನ್ನು ನೀಡಿರುವುದು ತಮಗೆ ತಿಳಿದ ವಿಚಾರ. ಆದರೆ ಪ್ರತೀ ಸರಕಾರ ಅಥವಾ ಹೊಸ ಸಚಿವರು ಬಂದಾಗ ನಮ್ಮಲ್ಲಿರುವ ಸಮಸ್ಯೆಗಳನ್ನು ಅವರೆದುರು ಇಡುತ್ತಾ ಬಂದಿದ್ದರೂ ಸಮಸ್ಯೆಗಳ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತಿದೆಯೇ ಹೊರತು ಅನೇಕ ಸಮಸ್ಯೆಗಳು ಪರಿಹಾರವನ್ನು ಕಾಣಲೇ ಇಲ್ಲ.ಆದುದರಿಂದ ಖಾಸಗಿ/ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದ ಬಹು ಮುಖ್ಯ ಬೇಡಿಕೆಗಳನ್ನು ತಮ್ಮಮುಂದಿಡುತ್ತಿದ್ದೇವೆ. ತಾವು ಇವುಗಳ ಬಗ್ಗೆ ಮುಕ್ತ ಮನಸ್ಸಿನಿಂದ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಒದಗಿಸಿಕೊಡುವಿರಾಗಿ ತಮ್ಮಲ್ಲಿ ವಿನಮ್ರವಾಗಿ ಕೇಳಿಕೊಳ್ಳುತ್ತೇವೆ.

ಖಾಸಗಿ/ಅನುದಾನಿತ ಕಾಲೇಜುಗಳ/ ಶಿಕ್ಷಕರ ಬೇಡಿಕೆಗಳು:

1. **ಅನುದಾನಿತ ಕಾಲೇಜುಗಳಲ್ಲಿಖಾಲಿಯಿರುವ ಉಪನ್ಯಾಸಕರು ಹಾಗೂ ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡುವುದು:** ಅನುದಾನಿತ ಕಾಲೇಜುಗಳಲ್ಲಿ ಶೇಕಡಾ 60 ಕ್ಕಿಂತಲೂ ಹೆಚ್ಚು ಉಪನ್ಯಾಸಕರು ಹಾಗೂ ಶಿಕ್ಷಕೇತರ ಹುದ್ದೆಗಳು ಕಳೆದ 20 ವರುಷಗಳಿಂದ ಖಾಲಿಯಾಗಿದ್ದು, ಶಿಕ್ಷಣದ ಗುಣಮಟ್ಟ ಸುಧಾರಿಸಬೇಕಾದರೆ ಈ ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮಕ್ಕೈಗೊಳ್ಳಬೇಕು.
2. **ಖಾಯಂ ಪ್ರಾಂಶುಪಾಲರ ನೇಮಕಾತಿ:** ರಾಜ್ಯದ ಶೇಕಡಾ 90 ಕ್ಕಿಂತಲೂ ಹೆಚ್ಚು ಅನುದಾನಿತ ಕಾಲೇಜುಗಳಲ್ಲಿ ಖಾಯಂ ಪ್ರಾಂಶುಪಾಲರಿಲ್ಲ. ಯು ಜಿ ಸಿ ನಿಯಮಾನುಸಾರ ಕೂಡಲೇ ಅನುದಾನಿತ ಕಾಲೇಜುಗಳಿಗೆ ಖಾಯಂ ಪ್ರಾಂಶುಪಾಲರ ನೇಮಕವನ್ನು ಮಾಡುವುದು ಶಿಕ್ಷಣದ ಗುಣಮಟ್ಟಾವನ್ನು ಕಾಪಾಡುವ ದೃಷ್ಟಿಯಲ್ಲಿ ಅತೀ ಅಗತ್ಯವಾಗಿರುತ್ತದೆ.
3. **ಖಾಸಗೀ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ತರುವುದು:** ಈಗಾಗಲೇ 10-20 ವರುಷಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಖಾಸಗೀ ಪದವಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದರಿಂದ ಗ್ರಾಮೀಣ, ಹಿಂದುಳಿದ ಹಾಗು ಬಡ ವಿದ್ಯಾರ್ಥಿಳಿಗೆ ಕಡಿಮೆ ವೆಚ್ಚದಲ್ಲಿ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ.

4. **ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳನ್ನು ಖಾಸಗಿ/ಅನುದಾನಿತ ಕಾಲೇಜುಗಳಿಗೆ ವಿಸ್ತರಿಸುವುದು:** ಸರಕಾರಿ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸರಕಾರದ ವಿವಿಧ ಸವಲತ್ತುಗಳನ್ನು ನೀಡುತ್ತಿದ್ದು ಖಾಸಗಿ/ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳು ತಾವು ಗ್ರಾಮೀಣ, ಹಿಂದುಳಿದ ಹಾಗು ಬಡ ವಿದ್ಯಾರ್ಥಿಳಾಗಿದ್ದರು ಇಂತಹ ಸೌಲಭ್ಯಗಳಿಂದ ವಂಚ್ತರಾಗಿದ್ದಾರೆ. ಆದುದರಿಂದ ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ನೀಡುವ ಎಲ್ಲಾಸೌಲಭ್ಯಗಳನ್ನು ಖಾಸಗಿ/ಅನುದಾನಿತ ಕಾಲೇಜುಗಳಿಗೂ ವಿಸ್ತರಿಸಬೇಕು.
5. **ವಿಶ್ವವಿದ್ಯಾನಿಲಯದ ನೀತಿ ನಿರೂಪಣಾ ಸಮಿತಿಗಳಲ್ಲಿ ಕಾಲೇಜು ಶಿಕ್ಷಕರಿಗೆ ಅವಕಾಶ ನೀಡಬೇಕು:** ಉನ್ನತ ಶಿಕ್ಷಣದ ನೀತಿ, ನಿಯಮಗಳನ್ನು ರೂಪಿಸುವ ಸಿಂಡಿಕೇಟ್, ಅಕಾಡಮಿಕ್ ಕೌನ್ಸಿಲ್‌ನಂತಹ ಬಹುತೇಕ ಸಮಿತಿಗಳಿಂದ ಕಾಲೇಜು ಶಿಕ್ಷಕರನ್ನು ಹೊರಗಿಡಲಾಗಿದೆ. ಉನ್ನತ ಶಿಕ್ಷಣದ ಬಹು ಮುಖ್ಯ ಅಂಗವಾದ ಕಾಲೇಜು ಶಿಕ್ಷಕರನ್ನು ಈ ಸಮಿತಿಗಳಿಗೆ ನೇಮಕವಾಗುವ ನಿಟ್ಟನಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಬೇಕು.
6. **ಅನುದಾನಿತ ಕಾಲೇಜುಗಳ ಶಿಕ್ಷಕರು ಹಾಗೂ ಶಿಕ್ಷಕೇತರರಿಗೆ ನಿಯಮಿತವಾಗಿ ವೇತನ ಹಾಗೂ ಭಡ್ತಿ ನೀಡಬೇಕು:** ಅನುದಾನಿತ ಕಾಲೇಜುಗಳ ಸಿಬ್ಬಂಧಿಗಳಿಗೆ ಪ್ರತೀ ತಿಂಗಳೂ ವೇತನ ಬಿಡುಗಡೆಯಲ್ಲಿ ತಡವಾಗುತ್ತಿದ್ದು, ಪ್ರತೀ ತಿಂಗಳಿನ 5 ನೇ ತಾರೀಖಿನೊಳಗಾಗಿ ಸಿಗುವಂತಾಗಬೇಕು. ಅದೇ ರೀತಿ ಕಾಲ ಕಾಲಕ್ಕೆ ದೊರೆಯಬೇಕಾಗಿರುವ ಭಡ್ತಿ ಕೂಡಾ 2-3 ವರುಷಗಳಾದರೂ ದೊರೆಯುತ್ತಿಲ್ಲ. ಬಹುಷ ಯಾವುದೇ ಇಲಾಖೆಯಲ್ಲಿ ಈ ಪರಿಸ್ಥಿತಿ ಇರಲಾರದು. ಎಲ್ಲರಿಗೂ ನಿಯಮಾನುಸಾರ ಸಿಗಬೇಕಾಗಿರುವ ವೇತನ, ಭತ್ಯೆ, ಭಡ್ತಿ, ಬಾಕಿ ವೇತನ ಯಾವುದೇ ರೀತಿಯ ವಿಳಂಭವಿಲ್ಲದೆ ದೊರೆಯುವಂತಾಗಬೇಕು.
7. **ಕಾಲ್ಪನಿಕ ವೇತನ ಸಮಸ್ಯೆ ಬಗೆಹರಿಯಬೇಕು:** ಅನುದಾನಿತ ಕಾಲೇಜುಗಳ ನೌಕರರಿಗೆ ಬಹುದೊಡ್ಡ ಆಘಾತವನ್ನು ತಂದೊಡ್ಡಿರುವ ಕಾಲ್ಪನಿಕ ವೇತನ ಸಮಸ್ಯೆಯನ್ನು ಯಾವುದೇ ನೌಕರನಿಗೆ ತೊಂದರೆಯಾಗದ ರೀತಿಯಲ್ಲಿ, ಶ್ರೀ ಬಸವರಾಜ ಹೊರಟ್ಟಿ ಸಮಿತಿಯ ಶಿಫಾರಸಿನಂತೆ ಪರಿಹರಿಸಬೇಕು.
8. **ಯು ಜಿ ಸಿ ಬಾಕಿ ವೇತನ ಪಾವತಿ:** ರಾಜ್ಯದ ಕಾಲೇಜು ಶಿಕ್ಷಕರಿಗೆ 2006 ರಿಂದ ಕೊಡಬೇಕಾಗಿರುವ ಯು ಜಿ ಸಿ ಬಾಕಿ ವೇತನವನ್ನು 2009 ರಲ್ಲಿಯೇ ಕೊಡಬೇಕಿತ್ತು. ಇದೀಗ ಈ ವೇತನ ಜಾರಿಗೆ ಬಂದು 5-6 ವರುಷ ಕಳೆದರು ಪೂರ್ತಿ ಬಾಕಿಯನ್ನು ಕೊಟ್ಟಿರುವುದಿಲ್ಲ. ಶಿಕ್ಷಕರು ತಮಗೆ ಬರಬೇಕಾಗಿರುವ ಬಾಕಿಯ ಮೊತ್ತದ ಶೇಕಡಾ 50ರಷ್ಟು ಮೌಲ್ಯವನ್ನು (ಹಣದುಬ್ಬರವನ್ನು ಪರಿಗಣಿಸಿ) ಈಗಾಗಲೇ ಕಳೆದುಕೊಂಡಿರುತ್ತಾರೆ. ಅದೆಷ್ಟೋ ಮಂದಿ ನಿವೃತ್ತಿಯಾಗಿದ್ದರೆ. ಆದುದರಿಂದ ಬಹುತೇಕ ಶಿಕ್ಷಕರು ನ್ಯಾಯಾಲದ ಮೊರೆ ಹೋಗಬೇಕಾಯಿತು. ಶಿಕ್ಷಕರಿಗೆ ನ್ಯಾಯವಾಗಿ ಬರಬೇಕಾಗಿರುವ ಯು ಜಿ ಸಿ ಬಾಕಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು.
9. **ಕಾಲೇಜು ಶಿಕ್ಷಕರ ಸಂಘಟನೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು:**ಕಾಲೇಜು ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ನೀತಿ, ನಿಯಮ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಕಾಲೇಜು ಶಿಕ್ಷಕರ ಒಕ್ಕೂಟ ಹಾಗೂ ಸ್ಥಳೀಯ ಮಟ್ಟದ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಕಾಲಕಾಲಕ್ಕೆ ಸಂಘಟನೆಯ ಪದಾಧಿಕಾರಿಗಳನ್ನು ಇಲಾಖಾ ಅಧಿಕಾರಿಗಳೊಂದಿಗೆಮುಕ್ತ ಚರ್ಚೆ ನಡೆಸುವರೇ ಸಭೆಗಳನ್ನು ನಡೆಸಬೇಕು.

ದಯವಿಟ್ಟು ಮೇಲಿನ ಬೇಡಿಕೆಗಳನ್ನು ಸಹನುಭೂತಿಯಿಂದ ಪರಿಶೀಲಿಸಿ ಪರಿಹಾರವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ಡಾ. ನಾರ್ಬರ್ಟ್ ಲೋಬೊ
ಅಧ್ಯಕ್ಷರು

ಡಾ. ಲಕ್ಷ್ಮಿನಾರಾಯಣ ಭಟ್
ಪ್ರಧಾನ ಕಾರ್ಯದರ್ಶಿ

VICE PRESIDENT I
Mr K.R. Shettigar, M.Com, M.Phil.
Associate Professor of Commerce
KSS College, Subrahmanya - 574 238
Cell: 94486 25232
E-mail: rangaiahshettigark@gmail.com

VICE PRESIDENT II
Dr Vishwanatha P., M.Sc Ph.D.,
Associate Professor of Chemistry
SDM College (Autonomous), Ujire - 574 240
Cell : 94483 35659
E-mail: drvishwanathap@rediffmail.com

JOINT SECRETARY I
Mrs Dejamma A., M.Com, M.Phil.
Assistant Professor of Commerce
Canara College, Mangalore - 575 003
Cell : 94801 61357
E-mail : Dejamma@gmail.com

JOINT SECRETARY II
Mrs Nayana M. Pakkala, M.A., M.Phil.
Assistant Professor of Political Science
MSRS College Shirva, Udupi - 574 116
Cell 9481518709
E-mail : manamamana@gmail.com